# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. :-- ಫ್ರಾ.ಸಾ. : 62**

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ ಸಂಜೀವ್ ಕುಮಾರ್ ಕಾರ್ನಿಕ್ |
| ತಂದೆಯ ಹೆಸರು | : | ಮಹದೇವ್ ಕಾರ್ನಿಕ್ |
| ವಯಸ್ಸು | : | 50 ವರ್ಷ |
| ಕೆಲಸ | : | ವಿಶೇಷ ತಹಶೀಲ್ದಾರ್, ವಿಶೇಷ ಜಿಲ್ಲಾಧಿಕಾರಿಗಳ ಕಚೇರಿ, ಬೆಳಗಾವಿ |
| ವಾಸ | : | ಬೆಳಗಾವಿ |

**ದಿನಾಂಕಃ 12-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಸರಕಾರಿ ಅಭಿಯೋಜಕರು ದಂಡ ಪ್ರಕ್ರಿಯಾ ಸಂಹಿತೆ ಕಲಂ 311 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯು ಪುರಸ್ಕರಿಸಲ್ಪಟ್ಟ ಮೇರೆಗೆ ಸಾಕ್ಷಿಯ ವಿಚಾರಣೆ.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-</u>**

1. ದಿ.03-08-2018 ರಿಂದ ದಿ.10-08-2022 ರವರೆಗೆ ನಾನು ಜೋಯ್ಡಾದಲ್ಲಿ ತಹಶೀಲ್ದಾರನಾಗಿ ಕೆಲಸ ನಿರ್ವಹಿಸಿರುತ್ತೇನೆ. ಜೋಯ್ಡಾದಲ್ಲಿ ಒಟ್ಟು 14 ಮಳೆ ಮಾಪನಾ ಕೇಂದ್ರಗಳು ಇರುತ್ತವೆ. ಪ್ರತೀ ದಿನ ಮಳೆಯ ಮಾಹಿತಿಯನ್ನು ಮಳೆ ಮಾಪನಾ ಕೇಂದ್ರದಿಂದ ಪಡೆದು, ನಮ್ಮ ಕಚೇರಿಯ ಕಂಪ್ಯೂಟರ್ ನಲ್ಲಿ ಡಾಟಾ ನಮೂದಿಸುತ್ತೇವೆ. ಆನಂತರ ಸದರಿ ಮಾಹಿತಿಯನ್ನು ಜಿಲ್ಲಾಧಿಕಾರಿಗಳ ಕಚೇರಿ ಮತ್ತು ಜಿಲ್ಲಾ ಸಾಂಖ್ಯಿಕ ಕಚೇರಿಗೆ ಒದಗಿಸುತ್ತೇವೆ. ದಿ.28-10-2018 ರಂದು ಕಾರವಾರ ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಯಿಂದ ಕೋರಿಕೆ ಪತ್ರ ಬಂದಿದ್ದು, ಅದರಲ್ಲಿ ದಿ.16-10-2018 ರಂದು ಮಧ್ಯಾಹ್ನ 3.00 ಯಿಂದ ದಿ.23-10-2018 ರ ಸಂಜೆ 6.00 ಗಂಟೆಯ ನಡುವಿನ ಅವಧಿಯಲ್ಲಿ ಆಕಳಗವಿಗೆ ಹೋಗುವ ರಸ್ತೆಯ ಅರಣ್ಯ ಪ್ರದೇಶದಲ್ಲಿ ಸುರಿದ ಮಳೆಯ ಮಾಹಿತಿ ಹಾಗೂ ಅದರ ಪ್ರಮಾಣದ

ಮಾಹಿತಿಯನ್ನು ನೀಡುವಂತೆ ಕೋರಿಕೊಂಡಿರುತ್ತಾರೆ. ಅದರಂತೆ ನಾನು ನಮ್ಮ ಕಚೇರಿಯ ಕಂಪ್ಯೂಟರಿನಲ್ಲಿ ದಾಖಲಾದ ಡಾಟಾವನ್ನು ಪರಿಶೀಲಿಸಿ, ದಿ.17-12-2018 ರಂದು ಪತ್ರ ಮುಖೇನ ಮಳೆಯ ಮಾಹಿತಿಯನ್ನು ನೀಡಿರುತ್ತೇನೆ. ಪೊಲೀಸರಿಂದ ಬಂದ ಕೋರಿಕೆ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-172 ಎಂದು, ಸಾಕ್ಷಿಯು ತಾನು ನೀಡಿದ ಮಾಹಿತಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-173 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-173(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ-**

2. ಮಳೆ ಮಾಪನ ಕೇಂದ್ರದಿಂದ ಮಾಹಿತಿಯನ್ನು ನೀಡಿದವರ ಹೆಸರು ಗೊತ್ತಿಲ್ಲ, ಆದರೆ ಸದರಿ ಮಾಹಿತಿಯನ್ನು ಸರಕಾರದಿಂದ ನೇಮಕೊಂಡ ಮಳೆ ಮಾಹಿತಿ ಅಧಿಕಾರಿಗಳು ನೀಡುತ್ತಾರೆ ಎಂದು ನುಡಿಯುತ್ತಾರೆ. ಮಳೆ ಮಾಹಿತಿ ಅಧಿಕಾರಿಯನ್ನಾಗಿ ಸರಕಾರವು ಯಾರನ್ನು ನೇಮಿಸಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಮಾಹಿತಿಯನ್ನು ಮೊದಲಿಗೆ ಫೋನ್ ಮೂಲಕ, ನಂತರ ಲಿಖಿತವಾಗಿ ಒದಗಿಸುತ್ತಾರೆ. ಮಳೆ ಮಾಪನ ಕೇಂದ್ರದವರು ನೀಡಿರುವ ಲಿಖಿತ ಮಾಹಿತಿಯನ್ನು ನಾನು ಪೊಲೀಸರಿಗೆ ನೀಡಿಲ್ಲ. ಸಾಕ್ಷಿಯು ಮುಂದುವರಿದು, ಮಳೆ ಮಾಪನ ಕೇಂದ್ರದವರು ನೀಡಿರುವ ಲಿಖಿತ ಮಾಹಿತಿಯನ್ನು ಪೊಲೀಸರು ಕೇಳಿರದ ಕಾರಣ, ಅದನ್ನು ನಾನು ನೀಡಿರುವುದಿಲ್ಲ. ನಿಪಿ-173 ರಲ್ಲಿ ಮಳೆ ಮಾಪನಾ ಕೇಂದ್ರದವರು ನೀಡಿದ ಮಾಹಿತಿಯ ಆಧಾರದ ಮೇಲೆ, ಸದರಿ ಮಾಹಿತಿಯನ್ನು ನೀಡುತ್ತಿದ್ದೇನೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ಮಳೆ ಮಾಪನಾ ಕೇಂದ್ರದವರಿಂದ ಯಾವುದೇ ಮಾಹಿತಿಯನ್ನು ಪಡೆಯದ ಕಾರಣ, ನಾನು ಸದರಿ ಮಾಹಿತಿಯನ್ನು ಒದಗಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡಲು ನಿಪಿ-173 ದಾಖಲೆಯನ್ನು ಸೃಷ್ಠಿ ಮಾಡಿ ನೀಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ-**

2 ಮತ್ತು 3 ನೇ ಆರೋಪಿತರ ವಕೀಲರು ಈ ದಿನ ನ್ಯಾಯಾಲಯದಲ್ಲಿ ಹಾಜರಿಲ್ಲದ ಕಾರಣ, ಸ್ವತಃ 2 ಮತ್ತು 3 ನೇ ಆರೋಪಿತರೇ 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**<u>ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್ ವಕೀಲರಿಂದಃ–</u>**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**<u>ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್.ವಕೀಲರಿಂದಃ–</u>**

5 ನೇ ಆರೋಪಿ ವಕೀಲರು ಈ ದಿನ ನ್ಯಾಯಾಲಯದಲ್ಲಿ ಹಾಜರಿಲ್ಲದ ಕಾರಣ, ಸ್ವತಃ 5 ನೇ ಆರೋಪಿಯು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ